# ಬುದ್ಧನ ಹಲ್ಲು

ಜಿ.ಎಸ್. ಜಯದೇವ್

ಬಹಳ ಹಿಂದೆ ಒಂದು ಕುಗ್ರಾಮದಲ್ಲಿ ವಿಧವೆಯೊಬ್ಬಳು ತನ್ನ ಒಬ್ಬನೇ ಮಗನೊಂದಿಗೆ ಕಷ್ಟದಿಂದ ಜೀವನ ನಡೆಸುತ್ತಿದ್ದಳು. ಆಕೆಗೆ ಇದ್ದ ಆಸ್ತಿ ಎಂದರೆ ಮುರುಕು ಗುಡಿಸಲು, ಒಂದು ಹಾಲು ಕೊಡುವ ಎಮ್ಮೆ, ಕೆಲವು ಕೋಳಿಗಳು. ಭಗವಾನ್ ಬುದ್ಧನ ಅನುಯಾಯಿಯಾದ ಆಕೆ ಅಪಾರವಾದ ದೈವಭಕ್ತೆ.

ಆಕೆಗೆ ಒಂದು ಕನಸಿತ್ತು. ಏನೆಂದರೆ ಮಗ ದೊಡ್ಡವನಾದ ಮೇಲೆ ಅವನನ್ನು ಬುದ್ಧ ಜ್ಞಾನ ಪಡೆದ ಬೋಧಿವೃಕ್ಷದ ದರ್ಶನಕ್ಕೆ ಕಳಿಸಬೇಕು. ಹಾಗೆಯೇ ಬುದ್ಧನ ಅಸ್ಥಿಯನ್ನು, ಕೊನೆಯ ಪಕ್ಷ ಅವನ ಹಲ್ಲನ್ನು ಒಂದು ಚಿನ್ನದ ತುಂಡು ಕೊಟ್ಟು ಖರೀದಿಸಿ ತರಬೇಕು. ತನ್ನ ಮಗನಿಗೆ ತನ್ನ ಕನಸನ್ನು ಹೇಳಿಕೊಳ್ಳುತ್ತಾ ಅವನನ್ನು ಕಷ್ಟಪಟ್ಟು ಸಲಹಿ ಬೆಳೆಸಿದಳು. ಅವನ ಪ್ರಯಾಣದ ಖರ್ಚಿಗೆಂದು ದಿನವೂ ಹೊಟ್ಟೆಬಟ್ಟೆ ಕಟ್ಟಿ, ಬಿಡಿಗಾಸುಗಳನ್ನು ಕೂಡಿಸಿದಳು. ಜೊತೆಗೆ ಹೇಗೋ ಮಾಡಿ ಒಂದು ಚಿನ್ನದ ತುಣುಕನ್ನು ಖರೀದಿಸಿ ಇಟ್ಟಿದ್ದಳು.

ವರ್ಷಗಳು ಉರುಳಿದವು. ಮಗ ದೃಢಕಾಯನಾದ ಯುವಕನಾದ. ಮುದುಕಿ ತನ್ನ ಕನಸು ಸಾಕಾರವಾಗುವ ಸಮಯ ಬಂತೆಂದು ಭಾವಿಸಿ ಹರ್ಷಗೊಂಡಳು. ಮಗನಿಗೂ ತನ್ನ ನಲ್ಮೆಯ ತಾಯಿಯ ಕನಸು ಏನೆಂದು ತಿಳಿದಿತ್ತು. ಅವನೂ ದೀರ್ಘ ಪ್ರಯಾಣಕ್ಕೆ ಸಿದ್ಧನಾಗಿದ್ದ. ಬೋಧಿವೃಕ್ಷವನ್ನು ನೋಡುವುದು ಮತ್ತು ಬುದ್ಧನ ಹಲ್ಲನ್ನು ತರುವುದು ಅವನಿಗೊಂದು ಸಾಹಸದ ಯಾತ್ರೆಯಾಗಿ ಕಂಡಿತ್ತು.

ಪ್ರಯಾಣಕ್ಕೆ ಹೊರಡುವ ದಿನ ಬಂತು. ಮುದುಕಿ ತನ್ನ ಮಗನ ಮೈದಡವಿ ಗದ್ಗದಿತಳಾಗಿ ಹೇಳಿದಳು, "ಮಗನೇ, ನನ್ನ ಇಡೀ ಜೀವನವೆಲ್ಲಾ ದುಡಿದು ಈ ಹಣವನ್ನು ಸಂಪಾದಿಸಿದ್ದೇನೆ. ಈ ಹಣದ ಚೀಲವನ್ನು ಜೋಪಾನವಾಗಿ ಇಟ್ಟುಕೊ, ದಾರಿಯಲ್ಲಿ ಸಹಪ್ರಯಾಣಿಕರ ಜೊತೆ ಜಗಳವಾಡಬೇಡ. ಅವರಿಗೆ ನಿನ್ನ ಬಳಿ ಇರುವ ಹಣದ ಗಂಟಿನ ಬಗ್ಗೆ ಗೊತ್ತಾಗದಂತೆ ನಡೆದುಕೊ. ಆದರೆ ಚೆನ್ನಾಗಿ ಊಟ ಮಾಡು. ಆರೋಗ್ಯ ಕಾಪಾಡಿಕೊ." ಜೊತೆಗೆ ಹೇಳಿದಳು, "ನೋಡು, ಈ ಚಿನ್ನದ ತುಂಡನ್ನು ನನ್ನ ಜೀವ ಎಂದು ತಿಳಿ. ಇದನ್ನು ಕೊಟ್ಟು ಬುದ್ಧನ ಹಲ್ಲನ್ನು ತೆಗೆದುಕೊಂಡು ಬಾ." ಮಗ ಎಲ್ಲದಕ್ಕೂ "ಹ್ಞೂ" ಎಂದ.

ಗದ್ಗದಿತಳಾಗಿ ತಾಯಿ ಮಗನನ್ನು ಬೀಳ್ಕೊಟ್ಟಳು. ಉತ್ಸಾಹದಿಂದ ನವಯುವಕ ಪ್ರಯಾಣ ಬೆಳೆಸಿದ. ಹೀಗೆ ಪ್ರಯಾಣ ಮಾಡುತ್ತಾ ಮನೆಯಿಂದ ದೂರವಾದ. ಮನೆಯ ನೆನಪುಗಳು ಮಸುಕಾದವು. ವಿವಿಧ ರೀತಿಯ ಪ್ರಯಾಣಿಕರು ಬೋಧಿವೃಕ್ಷದ ದರ್ಶನಕ್ಕೆಂದು ಆ ದಾರಿಯಲ್ಲಿ ಹೊರಟಿದ್ದರು. ಅವರಲ್ಲಿ ಅನೇಕರು ಮೋಜುಗಾರರು. ಪ್ರಯಾಣದುದ್ದಕ್ಕೂ ಹೊಸ ಹೊಸ ನಗರಗಳು, ವರ್ಣರಂಜಿತ ತಳುಕು–ಬಳುಕಿನ ಅಂಗಡಿಗಳು, ಆಮೋದ ಪ್ರಮೋದಗಳು ಎದುರಾದವು. ಮೊದಲು ತಾಯಿಯನ್ನು ಮರೆಯದೆ ಶಿಸ್ತಿನಿಂದ ಇದ್ದ ಮಗ ನಿಧಾನವಾಗಿ ಧಾರಾಳಿಯಾದ. ಹಣದ ಚೀಲ ನಿರೀಕ್ಷೆಗಿಂತ ಬೇಗ ಖರ್ಚಾಯಿತು. ನಿಧಾನವಾಗಿ ಬೋಧಿವೃಕ್ಷ, ಬುದ್ಧನ ಹಲ್ಲುಗಳ ವಿಷಯ ಮರೆತೇಹೋದವು. ಹಣದ ಚೀಲದಲ್ಲಿದ್ದ ಕೊನೆಯ ಬಿಡಿಗಾಸು ಕೂಡ ಖರ್ಚಾಗಿ ಹೋಯಿತು. ಹಾಗೆಯೇ ಚಿನ್ನವೂ ಮುಗಿದುಹೋಯಿತು. ಆದರೆ ಇವನು ಬೋಧಿವೃಕ್ಷದ ಕಡೆಗೆ ಅರ್ಧದಾರಿಯನ್ನೂ ಸವೆಸಿರಲಿಲ್ಲ.

ಒಂದು ದಿನ ಮಲಗಿದ್ದವನು ಎದ್ದುನೋಡುತ್ತಾನೆ, ಭಾರವಾದ ತಲೆ, ಆಳವಾದ ಖಿನ್ನತೆ ಬಿಟ್ಟರೆ ಅವನಲ್ಲಿ ಮತ್ತೇನೂ ಉಳಿದಿರಲಿಲ್ಲ. ಬೋಧಿವೃಕ್ಷ ಇರಲಿ, ಹೇಗೋ ಮಾಡಿ ಬದುಕಿಕೊಂಡು ಊರು ಸೇರಿದರೆ ಸಾಕು ಎನಿಸುವಂತಾಗಿತ್ತು. ಹಸಿವು ಬಾಯಾರಿಕೆಗಳ ನಡುವೆ ಬಳಲುತ್ತಾ ಮನೆಯ ದಾರಿ ಹಿಡಿದ. ತನ್ನ ತಾಯಿಯ ಮುಖವನ್ನು ನೆನೆದಾಗಲೆಲ್ಲ ಅವನಿಗೆ ಪಶ್ಚಾತ್ತಾಪ ಮೂಡುತ್ತಿತ್ತು. ಅಪರಾಧಿಪ್ರಜ್ಞೆ ಕಾಡತೊಡಗಿತು.

ಹೀಗೆಯೇ ಒಂದು ದಿನ ದಾರಿಬದಿಯಲ್ಲಿ ಮಲಗಿ ಎದ್ದಾಗ, ಸತ್ತುಹೋಗಿದ್ದ ನಾಯಿ ಕಂಡಿತು. ಅದರ ತೆರೆದ ಬಾಯಿಯಲ್ಲಿ ಹಲ್ಲುಗಳು ಕಂಡವು. ಯುವಕ ಒಂದು ಹಲ್ಲನ್ನು ಮುಟ್ಟಿದ. ಅದು ಉದುರಿ ಕೆಳಗೆ ಬಿತ್ತು. ಅದನ್ನೇ ಎತ್ತಿಕೊಂಡು ತನ್ನ ಕಿಸೆಗೆ ಸೇರಿಸಿ ಮನೆಯ ಕಡೆಗೆ ಪ್ರಯಾಣ ಬೆಳೆಸಿದ.

ಮಗ ಹಿಂದಿರುಗಿದ್ದನ್ನು ಕಂಡು ಮುದುಕಿಗೆ ಸಂಭ್ರಮವೋ ಸಂಭ್ರಮ. ಜೊತೆಗೆ ಮಗ ತಾನು ತಂದಿದ್ದ ನಾಯಿಯ ಹಲ್ಲನ್ನೇ ಬುದ್ಧನ ಹಲ್ಲು ಎಂದು ಹೇಳಿ ಕೊಟ್ಟುಬಿಟ್ಟ. ತಾಯಿಗೆ ಬುದ್ಧನೇ ಸಿಕ್ಕಷ್ಟು ಸಂತೋಷವಾಯಿತು. ಆ ಹಲ್ಲನ್ನು ಜೋಪಾನವಾಗಿ ತೊಳೆದು ಸುಂದರವಾದ ಹೂಗಳಿಂದ ಪೂಜಿಸಿದಳು.

ಬುದ್ಧನ ಹಲ್ಲು ಅಜ್ಜಿಮನೆಯಲ್ಲಿದೆ ಎಂಬ ಸುದ್ದಿ ಇಡೀ ಗ್ರಾಮದಲ್ಲೆಲ್ಲಾ ಹಬ್ಬಿತು. ಜನ ಬುದ್ಧನ ಹಲ್ಲು ನೋಡಿ ನಮಸ್ಕರಿಸಲು ಸಾಲುಗಟ್ಟಿ ನಿಂತರು. ಬುದ್ಧನ ಹಲ್ಲಿಗೆ ಅನೇಕ ಕಾಣಿಕೆಗಳು ಬರತೊಡಗಿದವು. ಅಷ್ಟೇ ಏಕೆ, ಜನ ಅಜ್ಜಿಯ ಕಾಲಿಗೆ ಬಿದ್ದು ಆಕೆಯ ಆಶೀರ್ವಾದವನ್ನೂ ಪಡೆಯತೊಡಗಿದರು.

ಸುತ್ತಮುತ್ತಲ ಹಳ್ಳಿಯವರು ಸಹ ಬಂದು ಬುದ್ಧನ ಹಲ್ಲಿನ ದರ್ಶನ ಪಡೆಯುತ್ತಿದ್ದರು. ಕೆಲವು ತಿಂಗಳೊಳಗಾಗಿ ಅಜ್ಜಿ ಅಸಾಧಾರಣ ವ್ಯಕ್ತಿಯಾಗಿಬಿಟ್ಟಳು. ಎಲ್ಲರೂ ಆಕೆಯ ಕಾಲಿಗೆ ಬಿದ್ದು ಆಶೀರ್ವಾದ ಪಡೆಯುತ್ತಿದ್ದರು. ಅಜ್ಜಿಯೂ ಸದಾಕಾಲ ಭಕ್ತಿಭಾವದಿಂದ ತುಳುಕುತ್ತಾ, ತನ್ನ ಜೀವನ ಸಾರ್ಥಕವಾದುದರ ಬಗ್ಗೆ ಹೆಮ್ಮೆಪಡುತ್ತಾ, ಬುದ್ಧನನ್ನೇ ನೆನೆಯುತ್ತಾ ಸಂಪೂರ್ಣ ಬದಲಾಗಿಬಿಟ್ಟಳು.